इस पुस्तिका में **20** मुद्रित पृष्ठ हैं।
This Booklet contains **20** printed pages.

www.prepp.in

# MVD18—II

परीक्षा पुस्तिका संख्या
Test Booklet No.

Prepp
Your Personal Exams Guide

LANG. CODE
**07**

## प्रश्न-पत्र—II / PAPER—II
## कन्नड़ भाषा परिशिष्ट / KANNADA LANGUAGE SUPPLEMENT
## भाग IV & V / PART IV & V

परीक्षा पुस्तिका संकेत
**Test Booklet Code**

**M**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**

**इस परीक्षा पुस्तिका के पिछले आवरण (पृष्ठ संख्या 20) पर दिए गए निर्देशों को ध्यान से पढ़ें।**
**Read carefully the Instructions on the Back Cover (Page No. 20) of this Test Booklet.**

**कन्नड़ में निर्देशों के लिए इस पुस्तिका के पृष्ठ संख्या 2 व 19 देखें।**
**For Instructions in Kannada, see Page Nos. 2 and 19 of this Booklet.**

### *परीक्षार्थियों के लिए निर्देश :*

1. यह पुस्तिका मुख्य परीक्षा पुस्तिका का एक परिशिष्ट है, उन परीक्षार्थियों के लिए जो **या** तो भाग—IV (भाषा—I) **या** भाग—V (भाषा—II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेजी व हिन्दी भाषा पर प्रश्न मुख्य परीक्षा पुस्तिका में भाग—IV व भाग—V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर-पत्र पर निशान लगाने के लिए **केवल काले/नीले बॉलपॉइंट पेन** का प्रयोग करें।
5. इस भाषा पुस्तिका का **संकेत M** है। यह सुनिश्चित कर लें कि इस भाषा परिशिष्ट परीक्षा पुस्तिका का संकेत, उत्तर-पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं तथा प्रत्येक 1 अंक का है :

   भाग—IV : भाषा—I (कन्नड़) (प्रश्न सं० 91–120)
   भाग—V : भाषा—II (कन्नड़) (प्रश्न सं० 121–150)
7. भाग—IV में भाषा—I के लिए 30 प्रश्न और भाग—V में भाषा—II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से सम्बन्धित प्रश्न दिए गए हैं। **यदि भाषा—I और/या भाषा—II में आपके द्वारा चुनी गई भाषा(एँ) कन्नड़ के अलावा है/हैं, तो कृपया उस भाषा वाली परीक्षा पुस्तिका माँग लें। जिन भाषाओं के प्रश्नों के उत्तर आप दे रहे हैं वह आवेदन-पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग—V (भाषा—II) के लिए, भाषा सूची से ऐसी भाषा चुनें जो उनके द्वारा भाषा—I (भाग—IV) में चुनी गई भाषा से भिन्न हो।**
9. रफ़ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर-पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

### *Instructions for Candidates :*

1. This Booklet is a Supplement to the Main Test Booklet for those candidates who wish to answer **EITHER** Part—IV (Language—I) **OR** Part—V (Language—II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part—IV and Part—V have been given in the Main Test Booklet. Language Supplements can be asked for separately.
4. Use **Black/Blue Ballpoint Pen only** for writing particulars on this page/marking responses in the Answer Sheet.
5. The CODE for this Language Booklet is **M**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **Two** Parts, IV and V, consisting of **60** Objective-type Questions and each carrying 1 mark :

   Part—IV : Language—I (Kannada) (Q. Nos. 91–120)
   Part—V : Language—II (Kannada) (Q. Nos. 121–150)
7. Part—IV contains 30 questions for Language—I and Part—V contains 30 questions for Language—II. In this Test Booklet, only questions pertaining to Kannada Language have been given. **In case, the language(s) you have opted for as Language—I and/or Language—II is a language other than Kannada, please ask for a Test Booklet that contains questions on that language. The languages being answered must tally with the languages opted for in your Application Form.**
8. **Candidates are required to attempt questions in Part—V (Language—II) in a language other than the one chosen as Language—I (Part—IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capital letters)

अनुक्रमांक (अंकों में) : ____________________
Roll Number (in figures)

(शब्दों में) : ____________________
(in words)

परीक्षा-केन्द्र (बड़े अक्षरों में) : ____________________
Centre of Examination (in Capital letters)

परीक्षार्थी के हस्ताक्षर : ____________________
Candidate's Signature

निरीक्षक के हस्ताक्षर : ____________________
Invigilator's Signature

Facsimile Signature Stamp of Centre Superintendent ____________________

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ. **MVD18—II** ಪ್ರಶ್ನೆ ಪುಸ್ತಿಕೆ ಸಂಕೇತ

www.prepp.in

LANG. CODE
**07**

**M**

Prepp Your Personal Exams Guide

# ಪ್ರಶ್ನೆ ಪತ್ರಿಕೆ—II

# ಕನ್ನಡ ಭಾಷಾ ಪೂರಕ

# ಭಾಗ IV & V

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಕನ್ನಡದಲ್ಲಿಯ ಸೂಚನೆಗಳಿಗಾಗಿ ಈ ಪ್ರಶ್ನೆಪುಸ್ತಿಕೆಯ ಪುಟ ಸಂಖ್ಯೆ 19 ಮತ್ತು 20ರಲ್ಲಿ ಕೊಟ್ಟ ಸೂಚನೆಗಳನ್ನು ಗಮನವಿಟ್ಟು ಓದಿರಿ.**

*ಪರೀಕ್ಷಾರ್ಥಿಗಳಿಗೆ ಸೂಚನೆಗಳು :*

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ **IV** (ಭಾಷೆ I) ಅಥವಾ ಭಾಗ V (ಭಾಷೆ **II**)ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು, ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, IIIನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ **IV** ಮತ್ತು Vರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು Vರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **M** ಆಗಿದೆ. ಉತ್ತರ ಪತ್ರಿಕೆಯ ಪುಟ-2ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ **IV** ಮತ್ತು **V**. ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ. ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ :

| | | |
|---|---|---|
| ಭಾಗ **IV** | : ಭಾಷಾ **I** – (ಕನ್ನಡ) | (ಪ್ರಶ್ನೆ **91**ರಿಂದ **120**) |
| ಭಾಗ **V** | : ಭಾಷಾ **II** – (ಕನ್ನಡ) | (ಪ್ರಶ್ನೆ **121**ರಿಂದ **150**) |

7. ಭಾಗ **IV**ರಲ್ಲಿ ಭಾಷೆ Iಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ **V**ರಲ್ಲಿ ಭಾಷೆ **II**ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. ಒಂದು ವೇಳೆ ಭಾಷೆ **I** ಮತ್ತು/ಅಥವಾ **II**ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.
8. ಪರೀಕ್ಷಾರ್ಥಿ ಭಾಗ **V** (ಭಾಷೆ **II**)ಕ್ಕಾಗಿ, ಭಾಷೆ **I** (ಭಾಗ **IV**)ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ **(OMR)** ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ **(Whitener)** ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ____________________

ಕ್ರಮ ಸಂಖ್ಯೆ (ಅಂಕೆಗಳಲ್ಲಿ) : ____________________

(ಅಕ್ಷರಗಳಲ್ಲಿ) : ____________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ____________________

ಪರೀಕ್ಷಾರ್ಥಿಯ ಸಹಿ : ____________________ ನಿರೀಕ್ಷಕರ ಸಹಿ : ____________________

Facsimile signature stamp of Centre Superintendent ____________________

Prepp
Your Personal Exams Guide

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-**IV**ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **91–120**) ಉತ್ತರಿಸಬೇಕು.

Candidates should attempt the questions from **Part–IV (Q. Nos. 91–120)**, if they have opted **KANNADA** as **Language–I** only.

www.prepp.in

## Part—IV / ಭಾಗ-IV

## Language—I / ಭಾಷೆ-I

## Kannada / ಕನ್ನಡ

Prepp
Your Personal Exams Gu

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IVರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 91–120) ಉತ್ತರಿಸಬೇಕು.**

ನಿರ್ದೇಶನಗಳು : ಕೆಳಗಿನ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ **91–105**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

**91.** ಭಾಷಾ ಬೋಧನೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕೊಡಬಹುದಾದ ಅತ್ಯುತ್ತಮ ಕಲಿಸುವ ಉಪಾಯವೆಂದರೆ :

(1) ವೈಯಕ್ತಿಕವಾದ ಬೋಧನೆ

(2) ಸಮೂಹ ಬೋಧನೆ

(3) ಯುಗ್ಮ-ಬೋಧನೆ (Peer teaching)

(4) ಮೇಲಿನ ಎಲ್ಲವೂ

**92.** ಭಾಷಾ ಬೋಧನೆಯ ವಸ್ತುನಿಷ್ಠ ಮೌಲ್ಯಮಾಪನಕ್ಕಾಗಿ ಇದು ಇರುವುದು ಅವಶ್ಯಕವಾಗಿದೆ

(1) ವಸ್ತುನಿಷ್ಠತೆ ಮತ್ತು ವಿಮರ್ಶಾತ್ಮಕತೆ (Objective and critical)

(2) ಸಮಗ್ರತೆ ಮತ್ತು ನಡವಳಿಕಾತ್ಮಕ (Comprehensive and behavioral)

(3) ವಿಶ್ವಸನೀಯ ಹಾಗೂ ಪ್ರಸ್ತುತತೆ (Reliable and valid)

(4) ಮೇಲಿನ ಎಲ್ಲವೂ

**93.** ಈ ಕೆಳಗಿನವುಗಳಲ್ಲಿ ಯಾವುದು ಭಾಷಾ ಬೋಧನೆಯ ಉದ್ದೇಶವಲ್ಲ?

(1) ವಿಚಾರಗಳ ಪ್ರಕಟಣೆ

(2) ಭಾಷೆಯನ್ನು ಅರಿಯುವುದು

(3) ಬರವಣಿಗೆಯಲ್ಲಿ ಪ್ರೌಢಿಮೆ

(4) ಸೃಜನಶೀಲತೆ

**94.** ಭಾಷಾ ಕೌಶಲ್ಯಗಳ ಸಂದರ್ಭದಲ್ಲಿ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸತ್ಯವಲ್ಲ?

(1) ಭಾಷಾ ಕೌಶಲ್ಯದ ಅಭಿವೃದ್ಧಿಯಲ್ಲಿ ಭಾಷಾ ಸೂತ್ರಗಳು, ಭಾಷಾ ವ್ಯವಹಾರಕ್ಕಿಂತ ಮಹತ್ವವಾದದ್ದಾಗಿವೆ.

(2) ಮಕ್ಕಳು ಕೇವಲ ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು – ಈ ಅನುಕ್ರಮದಲ್ಲಿ ಮಾತ್ರ ಕಲಿಯುತ್ತವೆ.

(3) ಶಾಲೆಗಳಲ್ಲಿ ವಿದ್ಯಾರ್ಥಿಗಳ ಓದುವ ಮತ್ತು ಬರೆಯುವ ಕೌಶಲ್ಯಗಳ ಕಡೆಗೆ ಹೆಚ್ಚು ಮಹತ್ವ ಕೊಡಬೇಕಾಗಿದೆ.

(4) ಭಾಷೆಯ ಎಲ್ಲ ನಾಲ್ಕು ಕೌಶಲ್ಯಗಳು ಅಂತರ್ ಸಂಬಂಧಿಯಾಗಿವೆ.

www.prepp.in

**95.** 'ಯಾವ ಭಾಷೆಯ ವ್ಯಾಕರಣವು ಅವನಿಗೆ/ಳಿಗೆ ಗೊತ್ತಿಲ್ಲವೋ ಅಂಥ ಭಾಷೆಯನ್ನು ಮಗುವು ಬೇಗನೇ ಕಲಿಯುತ್ತದೆ.' ಈ ಮಾತನ್ನು ಹೇಳಿದವರು

(1) ಮಹರ್ಷಿ ಪತಂಜಲಿ

(2) ಲಾರ್ಡ್ ಸ್ವೀಟ್ (Lord Sweet)

(3) ಲಾರ್ಡ್ ಮೆಕಾಲೆ

(4) ಜೀನ್ ಪೀಜೆಟ್ (Jean Piaget)

**96.** ನಿಮ್ಮ ತರಗತಿಯಲ್ಲಿ ನೀವು ಪಾಠ ಮಾಡುವಾಗ ವಿದ್ಯಾರ್ಥಿಗಳು ಭಾಷೆಯಲ್ಲಿ ಕಠಿಣವಾದ ಪ್ರಶ್ನೆಗಳು ಹಾಗೂ ಸಂದೇಹಗಳನ್ನು ಕೇಳಿದ ಸಂದರ್ಭದಲ್ಲಿ ನೀವು ಏನು ಮಾಡುತ್ತೀರಿ?

(1) ನೀವು ಮೊದಲೇ ಸಿದ್ಧರಾಗಿ ಹೋಗಿ ವಿದ್ಯಾರ್ಥಿಗಳ ಪ್ರಶ್ನೆ ಹಾಗೂ ಸಂದೇಹಗಳನ್ನು ಕೂಡಲೇ ನಿವಾರಿಸುತ್ತೀರಿ.

(2) ವಿದ್ಯಾರ್ಥಿಗಳ ಪ್ರಶ್ನೆ ಮತ್ತು ಸಂದೇಹಗಳನ್ನು ಟಿಪ್ಪಣಿ ಮಾಡಿಕೊಂಡು, ಮರುದಿವಸ ಅವುಗಳ ನಿವಾರಣೆ ಮಾಡುತ್ತೀರಿ.

(3) ವಿದ್ಯಾರ್ಥಿಗಳಿಗೆ ಪುಸ್ತಕವನ್ನು ಓದಿ ನಂತರ ಚರ್ಚಿಸಿ, ಸಂದೇಹ ನಿವಾರಣೆ ಮಾಡಿಕೊಳ್ಳಲು ಹೇಳಿ, ಪ್ರಶ್ನೆಗಳಿಗೆ ನಂತರ ಉತ್ತರಿಸುತ್ತೀರಿ.

(4) ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಟ್ಟು ಶಿಸ್ತು ಕಲಿಯುವಂತೆ ಅಂಥ ವಿದ್ಯಾರ್ಥಿಗಳಿಗೆ ಹೇಳುತ್ತೀರಿ.

**97.** ತಡವರಿಸುವ (cramming) ... ವಿದ್ಯಾರ್ಥಿಗಳ ವಿಕಾಸದಲ್ಲಿ ಯಾವ ... ಹಾನಿಯುಂಟಾಗುತ್ತದೆ?

(1) ಅವರ ಬುದ್ಧಿಮತ್ತೆಯಲ್ಲಿ ಬೆಳವಣಿಗೆಯಾಗು... ವುದಿಲ್ಲ.

(2) ಅವರ ಆತ್ಮವಿಶ್ವಾಸ ಕಳೆದುಹೋಗುತ್ತದೆ.

(3) ಕ್ಲಾಸಿನ ಅಭ್ಯಾಸದಿಂದ ಅವರು... ತಡೆಹಿಡಿಯಲ್ಪಡುತ್ತಾರೆ.

(4) ಅವರು ನಿಜವಾದ ಧ್ಯಾನವನ್ನು ಅಭ್ಯಾಸದಲ್ಲಿ... ಕೊಡಲು ಸಾಧ್ಯವಾಗುವುದಿಲ್ಲ.

**98.** ಭಾಷಾ ಬೋಧನೆಯಲ್ಲಿ ಅನುಗಮನಾತ್ಮಕ (Inductive) ವಿಧಾನದ ಒಂದು ಲಾಭವೆಂದರೆ

(1) ವಿದ್ಯಾರ್ಥಿಗಳು ಮನೆಯಲ್ಲಿ ಕೆಲಸ... ಮಾಡಬೇಕಾಗಿಲ್ಲ.

(2) ವಿದ್ಯಾರ್ಥಿಗಳಲ್ಲಿ ತಡವರಿಸುವ ಅಭ್ಯಾಸ... ಬೆಳೆಯುವುದಿಲ್ಲ.

(3) ಕ್ಲಾಸಿನಲ್ಲಿ ಶಿಸ್ತು ಸಾಧ್ಯವಾಗುತ್ತದೆ.

(4) ಅಲ್ಪ ಸಮಯದಲ್ಲಿ ವಿದ್ಯಾರ್ಥಿಗಳು ಹೆಚ್ಚು... ಕಲಿಯಬಲ್ಲರು.

**99.** ಭಾಷೆಯು ಅಭಿವ್ಯಕ್ತಿ ಮತ್ತು ಅಭಿಪ್ರಾಯಗಳ ______ ಅತ್ಯಂತ ಒಳ್ಳೆಯ ಮಾಧ್ಯಮವಾಗಿದೆ.

(1) ಪ್ರಚಾರದ (Propogation)

(2) ಸಂಗ್ರಹದ (Collection)

(3) ವಿನಿಮಯದ (Exchange)

(4) ಮೇಲಿನ ಎಲ್ಲವುಗಳ

100. ಭಾರತೀಯ ಮಗುವು ಆವಶ್ಯಕವಾಗಿ ಕಲಿಯ ಬೇಕಾದುದು ________.

www.prepp.in

(1) ಮಾತೃಭಾಷೆ

(2) ಮಾತೃಭಾಷೆ ಮತ್ತು ಒಂದು ಪ್ರಾದೇಶಿಕ ಭಾಷೆ

(3) ಮಾತೃಭಾಷೆ ಮತ್ತು ಇಂಗ್ಲಿಷ್

(4) ಯಾವುದಾದರೂ ಮೂರು ಭಾಷೆಗಳು

101. ಸಮಾವೇಶ ಅಥವಾ ಅಂತರ್ಗತ ಸ್ವರೂಪದ (Inclusive) ಕ್ಲಾಸ್ ರೂಮಿನಲ್ಲಿ ಭಾಷಾ ಬೋಧನೆಯ ಸವಾಲುಗಳಲ್ಲಿ ಒಂದು ______.

(1) ಭಾಷಾ ಕಲಿಕೆಯ ಸರಿಯಾದ ವಾತಾವರಣ ಬೆಳವಣಿಗೆಯ ಅಸಮರ್ಥತೆ

(2) ಭಾಷಾ ಕಲಿಕೆಯ ಸರಿಯಾದ ಸಾಮಗ್ರಿಗಳ ಕೊರತೆ ಇರುವುದು

(3) ವಿದ್ಯಾರ್ಥಿಗಳ ಸಾಮರ್ಥ್ಯದಲ್ಲಿನ ವೈವಿಧ್ಯತೆ

(4) ವಿದ್ಯಾರ್ಥಿಗಳಲ್ಲಿ ಅಸಮಾನವಾದ ಅಭಿರುಚಿ

102. ಈ ಕೆಳಗಿನವುಗಳಲ್ಲಿ ಯಾವುದು ಮಾತೃಭಾಷಾ ಬೋಧನೆಯ ಜ್ಞಾನದ ಗುರಿ ಅಲ್ಲ?

(1) ಭಾಷೆಯ ತತ್ವಗಳ ಹೇರಳ ಜ್ಞಾನವನ್ನು ದೊರಕಿಸಿಕೊಳ್ಳುವುದು

(2) ವಿಷಯ ವಸ್ತುಗಳ ಜ್ಞಾನಾರ್ಜನೆ

(3) ಉಚ್ಚಾರಣೆಯ ಜ್ಞಾನಾರ್ಜನೆ

(4) ಭಾಷೆಯಲ್ಲಿ ವಿವಿಧ ರೀತಿಯ ಬರವಣಿಗೆಗಳ ಜ್ಞಾನಾರ್ಜನೆ

103. ಈ ಕೆಳಗಿನವುಗಳಲ್ಲಿ ಯಾವುದು ಬೋ[illegible] ಆಗಿದೆ?

(1) ಆಯ್ಕೆಯ ವಿಧಾನ (Selection Method)

(2) ಆಸಕ್ತಿ ವಿಧಾನ (Interest Method)

(3) ಪ್ರೇರಣೆಯ ವಿಧಾನ (Motivation Method)

(4) ಮೇಲಿನ ಎಲ್ಲವೂ

104. ಭಾಷಾ ಬೋಧನೆಯಲ್ಲಿ ಶ್ರವಣ-ದೃಶ್ಯ ಸಾಮಗ್ರಿಗಳು ________ ಉಪಯುಕ್ತವಾಗುತ್ತವೆ.

(1) ಸರಿಯಾದ ಉಚ್ಚಾರಣೆಗಾಗಿ

(2) ಸರಿಯಾದ ಬರವಣಿಗೆಗಾಗಿ

(3) ಸರಿಯಾದ ಓದಿಗಾಗಿ

(4) ಮೇಲಿನ ಯಾವುವೂ ಅಲ್ಲ

105. ಉಪಚಾರಾತ್ಮಕವಾದ ಬೋಧನೆ (Remedial teaching) ವಿಧಾನವು

(1) ಸಮಸ್ಯೆಗಳ ಗುರುತಿಸುವಿಕೆಯ ಕಠಿಣತೆಯ ಮಟ್ಟವನ್ನು ಹೆಚ್ಚಿಸುತ್ತದೆ.

(2) ಸಮಸ್ಯೆಗಳನ್ನು ನಿರ್ಮೂಲನ ಮಾಡುವಲ್ಲಿ ಯಶಸ್ಸನ್ನು ದೊರಕಿಸಿಕೊಡುತ್ತದೆ.

(3) ಸಮಸ್ಯೆಗಳನ್ನು ಅಸ್ತವ್ಯಸ್ತ ಸ್ವರೂಪದಲ್ಲಿ ಪ್ರಕಟಿಸುತ್ತದೆ.

(4) ಸಮಸ್ಯೆಗಳ ಮೇಲೆ ಭಾಷಾ ತತ್ವದ ಜ್ಞಾನವನ್ನು ಒದಗಿಸುತ್ತದೆ.

ನಿರ್ದೇಶನಗಳು: ಕೆಳಗಿನ ಗದ್ಯವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **106–114**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

www.prepp.in

ಕಲ್ಮಾಡಿ ನಮ್ಮ ಸುತ್ತಿಗೆ ದೊಡ್ಡ ಹಳ್ಳಿ. ಕಲ್ಮಾಡಿ ಎಂದು ಕೇಳಿ – ಇದು ಮಂಗಳೂರಿನ ಬಳಿ ಇರುವ ಕಲ್ಮಾಡಿ ಎಂದು ತಿಳಿಯಬಾರದು. ಲೋಕಕ್ಕೆಲ್ಲಾ ನಮ್ಮ ಕಲ್ಮಾಡಿಯೆ ಕಲ್ಮಾಡಿ ಎಂದು ನಾನು ಬಹುಕಾಲ ತಿಳಿದಿದ್ದೆ. ಈಚೆಗೆ ನಮ್ಮ ಮಿತ್ರರೊಬ್ಬರು ಮಂಗಳೂರಿನ ಬಳಿ ಒಂದು ಕಲ್ಮಾಡಿ ಇದೆ ಎಂದು ಹೇಳಿದರು. ನಮ್ಮ ಕಲ್ಮಾಡಿಯ ಒಂದೇ ಆಗಿರುವ ಯಶಸ್ಸು, ಇದರಿಂದ ಅರ್ಧ ಆದಹಾಗಾಯಿತು. ಈ ಕಲ್ಮಾಡಿ ನಮ್ಮೂರಿನ ಪಕ್ಕದ ಹಳ್ಳಿ. ಹೊರಹಳ್ಳಿ ಕಲ್ಮಾಡಿಗೆ ಮಧ್ಯೆ ಇರುವುದೆಲ್ಲ ಸಣ್ಣ ಒಂದು ಕೆರೆ. ಕೆರೆ ಮಧ್ಯೆ ಇರಲಿಲ್ಲ ಎಂದರೆ ನಮ್ಮ ಊರು ಕಲ್ಮಾಡಿಯ ಒಂದು ಮಜರೆಯಾಗುತ್ತಿದ್ದಿತೋ ಏನೋ. ಸ್ವಲ್ಪ ಸಮುದ್ರ ನಡುವೆ ಇರುವ ಕಾರಣದಿಂದ ಯೂರೋಪಿನ ಸಣ್ಣ ಸಣ್ಣ ರಾಜ್ಯಗಳು ಸ್ವತಂತ್ರ ರಾಷ್ಟ್ರಗಳಾಗಿರುವಂತೆ, ಆ ಕೆರೆಯ ಕೃಪೆಯಿಂದ ನಮ್ಮೂರು ಲೆಕ್ಕದಲ್ಲಿ ಬೇರೆ ಒಂದು ಹೆಸರನ್ನು ಪಡೆಯಿತು.

ನನಗೆ ಊರುಗಳ ಹೆಸರುಗಳನ್ನು ಕುರಿತು ಯಾವಾಗಲೂ ಕುತೂಹಲ. ಕಲ್ಮಾಡಿ ಎಂದರೆ ಏನೆಂದು ಬಹಳ ಸಲ ಯೋಚಿಸಿದ್ದೇನೆ. ಅಲ್ಲಿಯವರು ಕಲ್ಲು ಮಾರಿ ಎನ್ನುವುದು ಕಲ್ಲು ಮಾಡಿ, ಕಲ್ಮಾಡಿ ಆಯಿತು ಎಂದು ಹೇಳುತ್ತಾರೆ. ಕಲ್ಮಾಡಿಯಲ್ಲಿರುವ ದೊಡ್ಡ ವಿಶೇಷವೆಂದರೆ ಊರಿನ ಮಾರಿಕಾ ದೇವತೆ. ಆದಕಾರಣ ಆ ಊರಿನ ಜನರು ಎಲ್ಲವನ್ನೂ ಮಾರಿ ಮಹಿಮೆಗೆ ತಿರುಗಿಸುತ್ತಾರೆ. ಕಲ್ಲು ಮಾರಿ ಎಂದರೆ ಕಲ್ಲಿನಲ್ಲಿ ಮಾಡಿರುವ ಮಾರಿ ಎಂದು ಅರ್ಥವಾಗಬಹುದು. ನಮ್ಮ ಸುತ್ತಿನಲ್ಲೆಲ್ಲ ಗ್ರಾಮದೇವತೆ ಕಲ್ಲಿನಲ್ಲಿ ಮಾಡಿದ ವಿಗ್ರಹವೇ ಆಗಿರುವುದರಿಂದ ಆ ವ್ಯುತ್ಪತ್ತಿ ನನಗೇಕೋ ಒಪ್ಪಲಿಲ್ಲ. ಕಲ್ಲಿನಂಥ ಮಾರಿ ಎಂದು ಅರ್ಥ ಮಾಡುವುದಾದರೂ ಕಲ್ಮಾಡಿಗೆ ಹೆಚ್ಚಿನ ಪ್ರಾಶಸ್ತ್ಯ ಬರಬಹುದೇ ಎಂಬ ವಿಚಾರದಲ್ಲಿ ಸಂಶಯ. ಮಾರಿ ಎಂದ ಮೇಲೆ ಮಾರಿ; ಅದರ ಮೇಲೆ ಕಲ್ಲಿನಂಥ ಮಾರಿಯೇನು, ಬೆಣ್ಣೆಯಂಥ ಮಾರಿಯೇನು? ಆದರೆ ಕಲ್ಮಾಡಿಯ ಮಾರಿಯಲ್ಲಿ ಒಂದು ವಿಶೇಷವಿರುವುದರಿಂದ ಅದೇ ಅರ್ಥ ಇದ್ದರೂ ಇರಬಹುದೆಂದು ಊಹಿಸಬಹುದಾಗಿದೆ. ಆ ವಿಶೇಷ ಯಾವುದು ಅಂದರೆ, ಅಲ್ಲಿ ಮಾರಿಯ ಹಬ್ಬಕ್ಕೆ ನಮ್ಮ ಊರುಗಳಿಗಿಂತ ವಿಜೃಂಭಣೆ ಹೆಚ್ಚು. ನಮ್ಮ ಊರುಗಳಲ್ಲಿ ಗ್ರಾಮದೇವತೆ ಒಂದು ಕುರಿಯಿಂದಲೋ, ಒಂದು ಕೋಳಿಯಿಂದಲೋ, ಒಂದು ಆಡಿನಿಂದಲೋ ತೃಪ್ತಳಾಗುತ್ತಾಳೆ. ಕಲ್ಮಾಡಿಯಲ್ಲಿ ಜನರಿಗೆ ... ಕಾಲದಿಂದಲೂ ಮಾರಿಗೆ ವರ್ಷಕ್ಕೆ ಒಂದು ಬಲಿತ ಕೋಣ... ಹೊರತಾಗಿ ಇನ್ನು ಯಾವುದೂ ಸಾಕಾಗುವುದಿಲ್ಲ.

Prepp
Your Personal Exams Guide

ಬಲಿಯಾಗುವ ಜೀವ ಊರ ಪಾಪದ ಮೊತ್ತ. ಅದರ ಜನದ... ಪ್ರತಿನಿಧಿ. ದೊಡ್ಡ ಊರಿನಲ್ಲಿ ದೊಡ್ಡ ಜೀವ ಬಲಿ. ಊರು ದೊಡ್ಡದಾಗಿರುವುದರಿಂದ ಗ್ರಾಮಸ್ಥರು ಒಂದು ಕೋಣವನ್ನು ಕೊಡುವಷ್ಟರ ಮಟ್ಟಿಗೆ ಶಕ್ತಿಯನ್ನು ಪಡೆದಿದ್ದಾರೆಂದೂ ಇದರ ಕಾರಣವನ್ನು ಊಹಿಸಬಹುದು. ಆದರೆ ಇದರ ಜೊತೆಗೆ ಉಳಿದ ಊರುಗಳ ಮಾರಿಗಿಂತ ಕಲ್ಮಾಡಿಯ ಮಾರಿ ಹೆಚ್ಚು ಪ್ರತ್ಯಕ್ಷ, ಎಂದರೆ ಕಠಿಣ, ಎಂಬ ಒಂದು ನಂಬಿಕೆಯೂ ಇದೆ. ಆದರೂ ಕಟ್ಟುವಾಗಲೇ ಇಂಥ ಹೆಸರಿಡುತ್ತಾರೆಯೇ? ಊರಿಗೂ ಮುಂದೇ ಮಾರಿ?

**106.** ಕಲ್ಮಾಡಿಯ ಯಶಸ್ಸು ಅರ್ಧ ಆಗಿದ್ದು ಈ... ಕಾರಣದಿಂದ

(1) ಕಲ್ಮಾಡಿಯ ಬಳಿಯೇ ಇನ್ನೊಂದು ಹಳ್ಳಿ... ಇದ್ದುದರಿಂದ

(2) ಇನ್ನೊಂದು ಕಲ್ಮಾಡಿ ಇದೆ ಎಂದು ತಿಳಿದಿದ್ದರಿಂದ

(3) ಕಲ್ಮಾಡಿಗೆ ಪರ ಊರಿನವರು ಬಂದದ್ದರಿಂದ

(4) ಕಲ್ಮಾಡಿಗೆ 'ಮಾರಿ' ಬಂದುದ್ದರಿಂದ

**107.** ನಮ್ಮೂರು ಕಲ್ಮಾಡಿಯಿಂದ ಪ್ರತ್ಯೇಕವಾಗಲು ಕಾರಣ...

(1) ಒಂದು ಕೆರೆ

(2) ಸ್ವಲ್ಪ ಸಮುದ್ರದಂತೆ ಕಾಣುವ ನೀರು

(3) ಕಲ್ಮಾಡಿ ದೊಡ್ಡ ಊರು ಆದ್ದರಿಂದ

(4) ರಾಜಕೀಯ ಕಾರಣಗಳಿಂದ

**108.** ಕಲ್ಮಾಡಿಯ ಯಾವ ವ್ಯುತ್ಪತ್ತಿ ಲೇಖಕನಿಗೆ ಒಪ್ಪಿಗೆ... ಇಲ್ಲ?

(1) ಕಲ್ಮಾಡಿ

(2) ಕಲ್‌ಮಾಡಿ

(3) ಕಲ್ಲು ಮಾಡಿ

(4) ಕಲ್ಲು ಮಾರಿ

Prepp
Your Personal Exam Guide

www.prepp.in

**109.** ಕಲ್ಮಾಡಿಯ ಮಾರಿಯ ವಿಶೇಷ

(1) ಅದು ಭಯಂಕರವಾಗಿದೆ

(2) ಬೇರೆ ಮಾರಿಗಿಂತ ಅದು ದೊಡ್ಡದು

(3) ಬಲಿತ ಕೋಣದ ಬಲಿ

(4) ಈ ಮಾರಿಯ ವೇಷಭೂಷಣ ವಿಚಿತ್ರವಾದದ್ದು

**110.** ಕೋಣವು ಯಾವುದರ ಸಂಕೇತವಾಗಿದೆ?

(1) ಮಾರಿಗೆ ಸಂಕೇತ

(2) ಬಲಿಷ್ಟತೆಗೆ ಸಂಕೇತ

(3) ಊರ ಪಾಪದ ಮೊತ್ತ

(4) ಮಾರಿಯ ಬಲಿಗೆ ಸಂಕೇತ

**111.** 'ಕೋಣ' ಪದದ ವಿರುದ್ಧ ಲಿಂಗ ಪದ

(1) ಎಮ್ಮೆ

(2) ಹಸು

(3) ಕೋಣೆ

(4) ಎತ್ತು

**112.** 'ಪ್ರತ್ಯಕ್ಷ' ಎನ್ನುವ ಪದಕ್ಕೆ ಈ ಗ[illegible] ಅರ್ಥ

(1) ಮುಖತೋರು

(2) ಕಾಣಿಸು

(3) ಆಶೀರ್ವಾದ ಮಾಡು

(4) ಕಠಿಣ

**113.** 'ಜ್ಞಾಪಕ' ಪದದ ವಿರುದ್ಧ ಪದ

(1) ಮರೆವು

(2) ನೆನಪು

(3) ಅಪ್ರಜ್ಞಾಪೂರ್ವಕ

(4) ಕನಸು

**114.** ಕಥೆಯಲ್ಲಿನ "ಊರಿಗೂ ಮುಂದೇ ಮಾರಿ?" ವಾಕ್ಯದ ಅರ್ಥ

(1) ಊರಿನ ಮುಂದೆ ಮಾರಿಯ ಕಲ್ಲೇ?

(2) ಊರಿನ ಎದುರುಗಡೆ ಕಲ್ಲಿನ ಮಾರಿ

(3) ಊರು ಹುಟ್ಟುವ ಮುಂಚೆ 'ಮಾರಿ' ಹೆಸರು

(4) ಊರಿನ ಹೆಸರಿನ ಮುಂದೆ 'ಮಾರಿ' ಪದ

ನಿರ್ದೇಶನಗಳು: ಕೆಳಗಿನ ಪದ್ಯವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **115–120**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

www.prepp.in

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗೆ ಅಂಜಿದೊಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ?
ಚೆನ್ನಮಲ್ಲಿಕಾರ್ಜುನ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

**115.** ಮೊದಲ ಆರು ಸಾಲಿನಲ್ಲಿ ಪುನರಾವರ್ತನೆಗೊಳ್ಳುವ ಪೂರ್ಣ ಕ್ರಿಯಾಪದವು

(1) ಡೆಂತಯ್ಯ

(2) ಎಂತಯ್ಯ

(3) ಅಯ್ಯ

(4) ಮಾಡಿ

**116.** ಈ ಕವಿತೆಯ ಮುಖ್ಯ ಭಾವ

(1) ಲೋಕದಲ್ಲಿ ಇದ್ದ ಬಳಿಕ ಅದನ್ನು ಎದುರಿಸಬೇಕು

(2) ಕೋಪವನ್ನು ಮಾಡಿಕೊಳ್ಳಬಾರದು

(3) ಸಮಾಧಾನದಿಂದ ಎಲ್ಲವನ್ನೂ ತಿರಸ್ಕರಿಸಬೇಕು

(4) ಹೊಗಳಿದರೆ ಒಪ್ಪಬೇಕು

**117.** ಇಲ್ಲಿ ಲೋಕತತ್ವವನ್ನು ಯಾರಿಗೆ ಹೇಳಲಾಗಿದೆ?

(1) ಲೋಕವನ್ನು ತಿರಸ್ಕರಿಸುವವರಿಗೆ

(2) ಲೋಕಕ್ಕೆ ಅಂಜಿಕೊಂಡವರಿಗೆ

(3) ಲೋಕದಲ್ಲಿ ಹೊಂದಿಕೊಳ್ಳದವರಿಗೆ

(4) ಲೋಕವನ್ನು ಪ್ರೀತಿಯಿಂದ ನೋಡುವವರಿಗೆ

**118.** ಬೆಟ್ಟ, ಸಮುದ್ರ, ಸಂತೆ – ಇವುಗಳನ್ನು ಯಾವುದಕ್ಕೆ ಸಂವಾದಿ ಸಂಕೇತವನ್ನಾಗಿ ಮಾಡಲಾಗಿದೆ?

(1) ಲೋಕದ ಬದುಕಿಗೆ

(2) ಪ್ರಕೃತಿಗೆ

(3) ಕ್ರೂರವಾದ ಜಗತ್ತಿಗೆ

(4) ಆನಂದ ಕೊಡುವ ಅನುಭವಕ್ಕೆ

**119.** 'ಸಂತೆಯೊಳಗೆ' ಪದವನ್ನು ಬಿಡಿಸಿದರೆ ಹೀಗೆ ಆಗುತ್ತದೆ

(1) ಸಂತ್ + ಒಳಗೆ

(2) ಸಂತೆ + ಯೊಳಗೆ

(3) ಸಂತೆಯೊ + ಳಗೆ

(4) ಸಂತೆ + ಒಳಗೆ

**120.** 'ನಿಂದೆ' ಪದದ ಅರ್ಥ

(1) ನಿಂತು

(2) ನಿಲ್ಲದೆ

(3) ಬಯ್ಗುಳು

(4) ನಿರಾಕರಿಸು

Prepp
Your Personal Exams Guide

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-Vರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121–150) ಉತ್ತರಿಸಬೇಕು

Candidates should attempt the questions from **Part–V (Q. Nos. 121–150)**, if they have opted **KANNADA** as **Language–II** only.

→

www.prepp.in

# Part—V / ಭಾಗ-V

## Language—II / ಭಾಷೆ-II

## Kannada / ಕನ್ನಡ

Prepp
Your Personal Exams Gu

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-Vರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 121–150) ಉತ್ತರಿಸಬೇಕು.**

ನಿರ್ದೇಶನ : ಕೆಳಗಿನ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **121–135**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ:

**121.** ಸಮಾವೇಶ ಅಥವಾ ಅಂತರ್ಗತ ಸ್ವರೂಪದ ತರಗತಿಯಲ್ಲಿ ವಿದ್ಯಾರ್ಥಿಗಳು ಸಾಮಾನ್ಯವಾಗಿ _____ ತಪ್ಪುಗಳನ್ನು ಮಾಡುತ್ತಾರೆ.

(1) ಓದುವುದರಲ್ಲಿ

(2) ಬರೆಯುವುದರಲ್ಲಿ

(3) ಮಾತನಾಡುವುದರಲ್ಲಿ

(4) ಮೇಲಿನ ಎಲ್ಲವುಗಳಲ್ಲಿ

**122.** 'ವ್ಯಾಕರಣವು - ವ್ಯವಹಾರಿಕವೂ (Behavioural), ಸೈದ್ಧಾಂತಿಕವೂ (Theoretical) ಆಗಿದೆ.' - ಈ ಹೇಳಿಕೆಯನ್ನು ನೀವು ಎಷ್ಟರಮಟ್ಟಿಗೆ ಒಪ್ಪುತ್ತೀರಿ?

(1) ಸಂಪೂರ್ಣವಾಗಿ

(2) ಆಂಶಿಕವಾಗಿ

(3) ಒಪ್ಪುವುದಿಲ್ಲ

(4) ಸಹಮತ ಆಗಬಹುದು; ಆಗದೆಯೂ ಇರಬಹುದು

**123.** ಉಚ್ಚ ಪ್ರಾಥಮಿಕ ಅಥವಾ ಮಾಧ್ಯಮಿಕ ಘಟ್ಟದ ವಿದ್ಯಾರ್ಥಿಗಳಲ್ಲಿ ಭಾಷೆಯ ಬಗ್ಗೆ ಆಸಕ್ತಿ ಹುಟ್ಟಿಸಲು ಇದರ ಅವಶ್ಯಕತೆ ಇದೆ

(1) ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವಂತೆ ಮಾಡುವುದು

(2) ವಿದ್ಯಾರ್ಥಿಗಳಿಗೆ ಮೌಖಿಕವಾಗಿ ಹೆಚ್ಚುಹೆಚ್ಚಾಗಿ ವಿವರಿಸುವುದು

(3) ವಿದ್ಯಾರ್ಥಿಗಳಿಗೆ ಹೆಚ್ಚು ಉಕ್ತಲೇಖನ (Dictation)ಗಳನ್ನು ಕೊಡುವುದು

(4) ವಿದ್ಯಾರ್ಥಿಗಳ ವ್ಯಾಕರಣ ಜ್ಞಾನವನ್ನು ಹೆಚ್ಚಿಸುವುದು

**124.** ಮೌಖಿಕ ಪ್ರಸ್ತುತೀಕರಣಕ್ಕೆ ಈ ಕೆಳಗಿನವುಗಳಲ್ಲಿ ಯಾವುದು ಉಪಯುಕ್ತವಲ್ಲ?

(1) ಧ್ವನಿ ಪ್ರಸ್ತುತೀಕರಣ (Voice Presentation)

(2) ಕವನಗಳ ಪಠಣ (Poetry recitation)

(3) ಮುಖಾಮುಖಿ ಪ್ರಸ್ತುತೀಕರಣ (Face to Face Presentation)

(4) ಸಾಂಕೇತಿಕ ಭಾಷೆಯ ಮೂಲಕ ಪ್ರಸ್ತುತೀಕರಣ (Presentation through Sign Language)

**125.** 'ಮನುಷ್ಯನ ಜ್ಞಾನ ಸಾಮರ್ಥ್ಯದ ಬೆಳವಣಿಗೆಗಾಗಿ ಮಾತೃಭಾಷೆಯು ತಾಯಿಯ ಹಾಲಿನಷ್ಟೇ ಮಹತ್ವದ್ದಾಗಿದೆ.' ಇದನ್ನು ಯಾರು ಹೇಳಿದ್ದಾರೆ?

(1) ರಾಜರಿಷಿ ಟಂಡನ್

(2) ರಾಯ್‌ಬರ್ನ್

(3) ಮಹಾತ್ಮಾ ಗಾಂಧಿ

(4) ವಿವೇಕಾನಂದ

**126.** ವಿದ್ಯಾರ್ಥಿಗಳಿಗೆ ಯಾವ ಭಾಷೆಯಲ್ಲಿ ಹಿಡಿತವಿಲ್ಲವೋ ಅಂಥ ಭಾಷೆಯಲ್ಲಿ ಕಲಿಸಿದರೆ ಆಗ _________.

(1) ಸಮುಚಿತವಾದ ಮನಸ್ಸಿನ ಧ್ಯಾನವು ಸಾಧ್ಯವಾಗುವುದಿಲ್ಲ.

(2) ವಿದ್ಯಾರ್ಥಿಗಳು ತಡವರಿಸುವುದೋ, ಬಾಯಿಪಾಠ ಮಾಡುವುದೋ - ಈ ಅಭ್ಯಾಸಗಳನ್ನು ರೂಢಿಮಾಡಿಕೊಳ್ಳುತ್ತಾರೆ.

(3) ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ.

(4) ಮೇಲಿನ ಎಲ್ಲವೂ.

Your Personal Exam Guide

**127.** ಭಾಷಾ ಬೋಧನೆಯ ಸಂದರ್ಭದಲ್ಲಿ ಭಾಷೆಯನ್ನು [illegible]ಳಿಸುವ ಮಹತ್ವದ ಅಂಶವು ಇದು :

www.prepp.in

(1) ಕೇಳುವುದು ಮತ್ತು ಓದುವುದು

(2) ಕೇವಲ ಕೇಳುವುದು

(3) ಕೇವಲ ಓದುವುದು

(4) ಕೇವಲ ಬರೆಯುವುದು

**128.** ಭಾಷಾ ಬೋಧನೆಯ ಸಂದರ್ಭದಲ್ಲಿ ಕಲಿಯುವ ಸಾಮಗ್ರಿಗಳ ಮಹತ್ವಪೂರ್ಣ ಸವಾಲು ಇದು :

(1) ಕಡಿಮೆ ಸಮಯದಲ್ಲಿ ಹೆಚ್ಚು ಜ್ಞಾನವನ್ನು ಒದಗಿಸುವುದು.

(2) ಕಲಿಯುವ ಸಾಮಗ್ರಿಯ ಕಠಿಣವಾದ ಸ್ಥಾನವನ್ನು ಸರಿಯಾದ ಕ್ರಮದಲ್ಲಿ ವಿವರಿಸುವುದು.

(3) ಪಾಠಕ್ರಮದ ಕಡೆಗೆ ವಿದ್ಯಾರ್ಥಿಗಳ ಗಮನ ಹೋಗುವಂತೆ ಮಾಡುವುದು.

(4) ಕಲಿಸುವಿಕೆಯಲ್ಲಿ ಅಧ್ಯಾಪಕರ ಕಡಿಮೆ ಪರಿಶ್ರಮ.

**129.** 'ಬುದ್ಧಿವಂತ ವಿದ್ಯಾರ್ಥಿಗಳ ಉಚ್ಚಾರಣೆ ಹಾಗೂ ಶಬ್ದಕೋಶದ ಆಕರವು ಉಳಿದವರಿಗಿಂತ ಹೆಚ್ಚಾಗಿರುತ್ತದೆ'. ಇದನ್ನು ಯಾರು ಹೇಳಿದ್ದಾರೆ?

(1) ಟೆರ್‌ಮನ್ (Terman)

(2) ಫಿಶರ್ (Fisher)

(3) ಥಂಬಾ (Thamba)

(4) ಮೇಲಿನ ಎಲ್ಲರೂ

**130.** ಪದಗಳ ಅರ್ಥದ ಸ್ಪಷ್ಟೀಕರಣ ಕೊ[illegible] ಒಳ್ಳೆಯ ವಿಧಾನ ಯಾವುದೆಂದರೆ

Prepp
Your Personal Exams Gu

(1) ಪದಗಳನ್ನು ವಿವರಿಸುವುದು

(2) ಪದಕೋಶದಿಂದ (Dictionary) ಹುಡುಕುವುದು

(3) ಪದಗಳನ್ನು ವಾಕ್ಯದಲ್ಲಿ ಬಳಸುವಂತೆ ವಿದ್ಯಾರ್ಥಿಗಳಿಗೆ ಹೇಳಿ, ಅವರಿಂದಲೇ ಅರ್ಥವನ್ನು ಹೇಳಿಸುವ ಅವಕಾಶ ಕೊಡುವುದು

(4) ಭಾಷಾ ಬೋಧನೆಯ ಮೂಲಕ ಪದದ ಅರ್ಥವನ್ನು ಸ್ಪಷ್ಟೀಕರಿಸುವುದು

**131.** ಮುದ್ರಿತ ಪಠ್ಯಪುಸ್ತಕ ಇಲ್ಲದೆ, ದ್ವಿತೀಯ ಭಾಷೆಯನ್ನು ಕಲಿಯುವಲ್ಲಿ ಈ ಕೆಳಗಿನ ಯಾವ ವಿಧಾನವು ಹೆಚ್ಚು ಸಹಾಯಕವಾಗಿದೆ?

(1) ಸಹಜ (ಪ್ರಾಕೃತಿಕ) ವಿಧಾನ (Natural Approach)

(2) ಭಾಷೆಯ ನಿಮಗ್ನತೆ (ತಲ್ಲೀನತೆ) (Language immersion)

(3) ವ್ಯಾಕರಣ ಭಾಷಾಂತರ ವಿಧಾನ (Grammer translation Method)

(4) ಸಾಂದರ್ಭಿಕ ವಿಧಾನ (Situational Approach)

**132.** ತಪ್ಪು ಓದಿನ ಅಭ್ಯಾಸವು ಹುಟ್ಟುವುದಕ್ಕೆ ಇರುವ ಕಾರಣಗಳಲ್ಲಿ ಒಂದು :

(1) ಬಹುಭಾಷಿಕತೆ

(2) ದ್ವಿಭಾಷಿಕತೆ

(3) ಅತಿಯಾಗಿ ತುಂಬಿದ ಕ್ಲಾಸು

(4) ಓದುವಾಗ ಲೈನಿನ ಮೇಲೆ ಕೈಬೆರಳು ಇಟ್ಟು ಅದರ ಪ್ರಕಾರವೇ ಕಣ್ಣಿಗೆ ದಾರಿ ತೋರುತ್ತಾ ಹೋಗುವುದು

www.prepp.in

**133.** ಪದಜ್ಞಾನ ವಿಧಾನ (ಹಳೆಯ ವಿಧಾನ)ದ (Word knowledge Method) ಮೂಲಕ ಈ ಕೆಳಗಿನ ಯಾವ 'ಬೋಧನೆ-ಕಲಿಕೆಯ ಕಠಿಣತೆ'ಯನ್ನು ಪರಿಹರಿಸಲಾಗಿದೆ?

(1) ವಾಕ್ಯರಚನೆಯ ಕ್ರಮ ಸಂಯೋಜನೆಯಲ್ಲಿ ಸಹಾಯ

(2) ಸರಿಯಾದ ಉಚ್ಚಾರ

(3) ಓದುವ ಮಕ್ಕಳು ವಿವರಿಸುವ ಕಠಿಣತೆಯನ್ನು ಎದುರಿಸಬಾರದು

(4) ಮೇಲಿನ ಎಲ್ಲವೂ

**134.** 'ಕೌಶಲ್ಯ ಉದ್ದೇಶಗಳಿಗೆ' ಈ ಕೆಳಗಿನವುಗಳಲ್ಲಿ ಯಾವುದು ಸಂಬಂಧಿಸಿಲ್ಲ?

(1) ಓದುವುದು

(2) ಬರೆಯುವುದು

(3) ಕೇಳುವುದು

(4) ಭಾಷೆಯಲ್ಲಿ ಆಸಕ್ತಿ

**135.** ಭಾಷೆಯ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿರುವ ಕಾರಣಗಳು

(1) ಆರೋಗ್ಯ

(2) ಬುದ್ಧಿವಂತಿಕೆ

(3) ವೈಯಕ್ತಿಕ ಭಿನ್ನಾಭಿಪ್ರಾಯ

(4) ಮೇಲಿನ ಎಲ್ಲವೂ

ನಿರ್ದೇಶನಗಳು: ಕೆಳಗಿನ ಗದ್ಯವನ್ನು ಓದಿ ಅನಂತರದ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **136–143**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

ಚಂದ್ರಯ್ಯಗೌಡರಿಗೆ ಮೊದಲು ಅವರ ಅಣ್ಣ ಸುಬ್ಬಯ್ಯಗೌಡರು ಮನೆಗೆ ಯಜಮಾನರಾಗಿದ್ದರು. ಸುಬ್ಬಯ್ಯಗೌಡರು ಸಾಯುವಾಗ ಅವರಿಗೂ ಚಂದ್ರಯ್ಯಗೌಡರಿಗೂ ಮನಸ್ಸು ಸರಿಯಿರಲಿಲ್ಲ. ನಾಗಮ್ಮನವರು ತಮ್ಮ ಗಂಡನ ಸಾವಿಗೆ ಚಂದ್ರಯ್ಯಗೌಡರೇ ಕಾರಣವೆಂದು ಎಲ್ಲರೊಂದಿಗೂ ಸಾರುತ್ತಿದ್ದರು. ತನ್ನ ಗಂಡನ ಮೇಲೆ 'ದೆಯ್ಯಮಾಡಿ' ಕೊಂದರೆಂದು ಆಕೆ ನಂಬಿಬಿಟ್ಟಿದ್ದರು. ವಾಸ್ತವಾಂಶ ಅವರು ರೇಷ್ಮೆ ಕಾಯಿಲೆಯಿಂದ ಮೃತರಾಗಿದ್ದರು. ಚಂದ್ರಯ್ಯಗೌಡರೂ ನಾಗಮ್ಮನವರ ಮಾತಿನಲ್ಲಿ ಇತರರಿಗೆ ನಂಬುಗೆಯಾಗುವಂತೆ ವರ್ತಿಸುತ್ತಿದ್ದರು. ಆಕೆಯ ವಿಷಯದಲ್ಲಿ ದ್ವೇಷದಿಂದಲ್ಲದಿದ್ದರೂ ಅನಾದರದಿಂದ ಇರುತ್ತಿದ್ದರು. ನೊಂದೆದೆಯ ನಾಗಮ್ಮನವರಿಗೆ ಅವರ ಒಂದೊಂದು ಅನಾದರಣೆಯೂ ಭಯಂಕರ ವೈರದಂತೆ ತೋರುತ್ತಿತ್ತು. ಹೂವಯ್ಯನಿಗೆ ಇದೆಲ್ಲ ಗೊತ್ತಿದ್ದರೂ ಆತನು ಭಾವಜೀವಿಯಾಗಿದ್ದುದರಿಂದಲೂ, ಆತನ ಗಮನವೆಲ್ಲ ವಿದ್ಯಾರ್ಜನೆಯ ಕಡೆಗಿದ್ದುದರಿಂದಲೂ, ರಾಮಯ್ಯನ ವಿಶ್ವಾಸದ ಪ್ರಭಾವದಿಂದಲೂ ಯಾವ ಇತ್ಯರ್ಥದ ಕಾರ್ಯಕ್ಕೂ ಕೈ ಹಾಕದೆ ಸುಮ್ಮನಿದ್ದನು.

ರಾಮಯ್ಯನ ತಾಯಿ – ಚಂದ್ರಯ್ಯಗೌಡರ ಪ್ರಥಮ ಪತ್ನಿ – ತೀರಿಕೊಂಡಾಗ ಅವರು ದುಃಖಾತಿರೇಕದಿಂದ ಆತ್ಮಹತ್ಯೆ ಮಾಡಿಕೊಳ್ಳಲೋಸುಗ ಬಂದೂಕನ್ನು ಕೈಗೆ ತೆಗೆದುಕೊಂಡಿದ್ದರೂ ಒಂದು ವರ್ಷದ ಒಳಗಾಗಿಯೇ ಅವರಿಗೆ ಎರಡನೆ ವಿವಾಹ ನಡೆದುಹೋಗಿತ್ತು. ಎರಡನೇ ಹೆಂಡತಿ ಪುಟ್ಟಮ್ಮ ವಾಸು ಇಬ್ಬರನ್ನೂ ಹೆತ್ತು, ಮೂರನೆಯ ಹೆರಿಗೆಯಲ್ಲಿ ಶಿಶು ಸಮೇತ ದಿವಂಗತರಾದರು. ಅವರು ತೀರಿಕೊಂಡು ಇನ್ನೂ ಒಂದು ವರ್ಷ ಕಳೆಯುವುದರೊಳಗೆ, ಚಂದ್ರಯ್ಯಗೌಡರಿಗೆ ಮೂರನೆಯ ಮದುವೆಯ ಅವಶ್ಯಕತೆಯೂ ತೋರಿ ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ಅವರು ವಿಧುರರಾದ ಕೆಲವು ತಿಂಗಳೊಳಗೆ ಅವರ ಮೇಲೆ ಅಪವಾದ ಹುಟ್ಟಿತ್ತು. ಅವರ ಸೇರೆಗಾರರಾಗಿದ್ದ ರಂಗಪ್ಪಸೆಟ್ಟರ ಕೈಕೆಳಗೆ ಕೆಲಸ ಮಾಡುತ್ತಿದ್ದ ಒಬ್ಬ ದಕ್ಷಿಣಕನ್ನಡ ಜಿಲ್ಲೆಯ ಹೆಂಗಸಿನ ಪರವಾಗಿ ಅವರು ಪ್ರದರ್ಶಿಸಿದ ಅಸಾಧಾರಣವಾದ ಅನುರಾಗವೆ ಅಪವಾದಕ್ಕೆ ಕಾರಣವಾಗಿತ್ತು. ಚಂದ್ರಯ್ಯಗೌಡರು ದೃಢಕಾಯರಾಗಿ ಶ್ರೀಮಂತರಾಗಿದ್ದರೂ ನಡುವಯಸ್ಸು ಮೀರಿದ್ದುದರಿಂದಲೂ ಮೂರು ಮಕ್ಕಳ

ತಂದೆಯಾಗಿದುದರಿಂದಲೂ, ಸುಸಂಸ್ಕೃತರಾದ ಶ್ರೀಮಂತರೆಲ್ಲರೂ ಅವರಿಗೆ ಹೆಣ್ಣು ಕೊಡಲು ಹಿಂಜರಿದರು. ಗೌಡರು ಅಪ್ರತಿಭರಾಗದೆ ನೆಲ್ಲುಹಳ್ಳಿಗೆ ಹೋಗಿ ಹೆಣ್ಣು ಕೇಳಿದರು. ಅಸಂಸ್ಕೃತರೂ, ಒರಟು ಜೀವಿಗಳೂ, ಬಡವರೂ ಆಗಿದ್ದ ನೆಲ್ಲುಹಳ್ಳಿಯವರು ಹಿಗ್ಗಿ ಮರುಮಾತನಾಡದೆ ಹೆಣ್ಣು ಕೊಡಲು ಒಪ್ಪಿದರು. ಆ ವಿಚಾರ ತಿಳಿದ ಕೂಡಲೇ ಮುತ್ತಳ್ಳಿ ಶಾಮಯ್ಯಗೌಡರೇ ಮೊದಲಾದ ಹಿತಚಿಂತಕರೂ ಬಂಧುಗಳೂ ಚಂದ್ರಯ್ಯಗೌಡರನ್ನು ಆ ಸಾಹಸದಿಂದ ಪರಾಙ್ಮುಖಗೊಳಿಸಲು ಪ್ರಯತ್ನಿಸಿದರು. ಆ ಹೆಣ್ಣನ್ನು ತರುವುದು ನಿಮಗೆ ಯೋಗ್ಯವಲ್ಲ ಎಂದರು. ಪುಟ್ಟಮ್ಮ, ವಾಸು ಇಬ್ಬರೂ ತಮ್ಮ ದೊಡ್ಡಮ್ಮನಿಂದ ಎಲ್ಲ ವಿಷಯಗಳನ್ನೂ ಅರಿತು ಕಣ್ಣೀರು ಕರೆದರು. ಗೌಡರ ಮೇಲೆ ದ್ವೇಷವಿದ್ದ ನಾಗಮ್ಮನವರಿಗೂ ಕನಿಕರವುಂಟಾಯಿತು. ಏನೆಂದರೂ ಗೌಡರ ನವದಾಂಪತ್ಯ ಪ್ರೇಮ ಮಾತ್ರ ಒಂದಿನಿತೂ ಕುಗ್ಗಲಿಲ್ಲ.

ಅಂತೂ ಸುಬ್ಬಮ್ಮನು ಚಂದ್ರಯ್ಯಗೌಡರ ಧರ್ಮಪತ್ನಿಯಾಗಿ ಕಾನೂರಿಗೆ ಬಂದಳು.

**136.** ಸುಬ್ಬಯ್ಯಗೌಡರು ಯಾರು?

(1) ನಾಗಮ್ಮನವರ ಮೈದುನ

(2) ಚಂದ್ರಯ್ಯಗೌಡರ ಅಣ್ಣ

(3) ಚಂದ್ರಯ್ಯಗೌಡರ ತಮ್ಮ

(4) ವಾಸುವಿನ ತಂದೆ

**137.** ಸುಬ್ಬಯ್ಯಗೌಡರ ಸಾವಿಗೆ ಕಾರಣ ಇದು :

(1) ದೆಯ್ಯ ಮಾಡಿದ್ದರಿಂದ

(2) ವಯಸ್ಸು ಆಗಿದ್ದರಿಂದ

(3) ಚಂದ್ರಯ್ಯಗೌಡ ಕೊಂದಿದ್ದರಿಂದ

(4) ರೇಷ್ಮೆ ಕಾಯಿಲೆಯಿಂದ

**138.** ನಾಗಮ್ಮನವರಿಗೆ ವೈರದಂತೆ ಕಾಣು[illegible]

(1) ಚಂದ್ರಯ್ಯಗೌಡರ ಅನಾದರ

(2) ಸುಬ್ಬಯ್ಯಗೌಡರ ಸಾವು

(3) ಚಂದ್ರಯ್ಯಗೌಡರ ದ್ವೇಷ

(4) ನಾಗಮ್ಮನವರ ನೊಂದೆದೆ

**139.** ಚಂದ್ರಯ್ಯಗೌಡರು ಆಗಿದ್ದ ಮದುವೆಗಳು ಒಟ್ಟು—

(1) ನಾಲ್ಕು

(2) ಎರಡು

(3) ಮೂರು

(4) ಲೆಕ್ಕವಿಲ್ಲದಷ್ಟು

**140.** ರಾಮಯ್ಯನಿಗೆ ವಾಸು ಏನಾಗಬೇಕು?

(1) ಚಿಕ್ಕಮ್ಮನ ಮಗ

(2) ದೊಡ್ಡಮ್ಮನ ಮಗ

(3) ತನ್ನ ಸ್ವಂತ ತಮ್ಮ

(4) ದೊಡ್ಡಪ್ಪನ ಮಗ



www.prepp.in
Prepp Your Personal Exams Guide

**141.** ‘ಪರಾಙ್ಮುಖ’ ಪದದ ಅರ್ಥ

www.prepp.in

(1) ಸೋತ ಮುಖ

(2) ಸಾಯುವ ದಿಕ್ಕಿಗೆ ಮುಖ

(3) ವಿಮುಖ

(4) ಅಂತರ್ಮುಖ

**142.** ‘ಅನನ್ಯ’ ಪದಕ್ಕೆ ವಿರುದ್ಧ ಅರ್ಥ ಕೊಡುವ ಪದ

(1) ವಿಶಿಷ್ಟ

(2) ಸಾಮಾನ್ಯ

(3) ಅಸಾಧಾರಣ

(4) ಅನ್ಯ

**143.** ಚಂದ್ರಯ್ಯಗೌಡರಿಗೆ ಹೆಣ್ಣು ಕೊಡಲು ಹಿಂಜರಿಯಲು ಕಾರಣ

(1) ನಡುವಯಸ್ಸು ಮೀರಿರುವುದು

(2) ಶ್ರೀಮಂತರಾಗಿರುವುದು

(3) ಬೇರೆ ಹೆಂಗಸರ ಕಡೆಗೆ ತೋರುತ್ತಿದ್ದ ಅನುರಾಗ

(4) ಚಂದ್ರಯ್ಯಗೌಡರಿಗೆ ಅನೇಕ ಹೆಂಡತಿಯರು ಈಗಾಗಲೇ ಇದ್ದಿರುವುದು

prepp
Your Personal Exams Guide

ನಿರ್ದೇಶನಗಳು: ಕೆಳಗಿನ ಗದ್ಯವನ್ನು ಓದಿ ಅ... ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 144–150) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

ಹೆಣ್ಣುಮಕ್ಕಳಿಗೆಲ್ಲಾ ಮಕ್ಕಳ ಆಸೆ. ಮಕ್ಕಳೇ ಅವರ ಪ್ರಾಣ. ಮಕ್ಕಳಾಗದವಳ ಬಾಳು ವ್ಯರ್ಥ. ಮಕ್ಕಳಾದ ಕೂಡಲೇ ಹೆಣ್ಣಿಗೆ ಮನೆಯ ಯಜಮಾನಿಕೆ ಖಂಡಿತವಾಯಿತು. ಅವಳು ಮನೆಯ ರಾಣಿಯಾದಳು. ಆಗ ಎಲ್ಲರೂ ಅವಳನ್ನು ಗೌರವಿಸಬೇಕು. ತಾಯ್ತನದ ಜವಾಬ್ದಾರಿ ಅವಳಿಗೆ ಮಹತ್ವವನ್ನು ಕೊಡುತ್ತದೆ. ಆದುದರಿಂದ “ಹೊಟ್ಟೇಲಿ ಮಕ್ಕಳ ಕೊಡು ಶಿವನೇ” ಎಂಬುದೇ ಹೆಣ್ಣುಮಕ್ಕಳ ಬಯಕೆಯಾಗಿರುತ್ತದೆ. ವೈಧವ್ಯ ಹೆಣ್ಣಿಗೆ ಹೇಗೆ ನರಕವೋ ಮಕ್ಕಳಿಲ್ಲದ ಬಾಳೂ ಅಷ್ಟೇ ಭಯಂಕರ.

ಜಗತ್ತಿನ ನಿಯಮಗಳು ಮನುಷ್ಯ ಪ್ರಪಂಚಕ್ಕೆಲ್ಲ ಒಂದೇ ಸಮ. ಜನರ ಆಚಾರ ವ್ಯವಹಾರ, ವೇಷಭೂಷಣ, ಮಾತು, ನಡವಳಿಕೆ ಬೇರೆ ಬೇರೆಯಾಗಿರಬಹುದು. ಆದರೆ ಸಂಸಾರದ ಜೀವನದ ಮೂಲಭೂತ ನಿಯಮಗಳು ಎಂದರೆ ಪ್ರಿಯ ಪ್ರೇಯಸಿಯರಲ್ಲಿ ಅನುರಾಗ, ತಾಯಿಯ ಕರುಳು, ತಮ್ಮ ಜೀವ, ತಮ್ಮ ಸಂತಾನದ ಮೂಲಕ ಮುಂದುವರಿಸುವ ಆಸೆ, ಸುಖದಲ್ಲಿ ಅಭಿಲಾಷೆ, ಕಷ್ಟದಲ್ಲಿ ಜಿಗುಪ್ಸೆ, ಇವು ಜಗತ್ತಿಗೆಲ್ಲಾ ಒಂದೇ, ಮನುಷ್ಯನ ಸ್ವಭಾವವೂ ಎಲ್ಲೆಲ್ಲಿಯೂ ಒಂದೇ. ತಾಯಿತನ ಹೆಣ್ಣಿನ ಬಾಳಿನ ಕಿರೀಟ. ತಾಯಿಯಾಗುವ ಆಸೆಯನ್ನು ಜಯಿಸಿದ ಹೆಣ್ಣು ಯಾವ ದೇಶದಲ್ಲಿಯೂ ಇಲ್ಲ. ರಷ್ಯದಲ್ಲಿ “ಮಕ್ಕಳನ್ನು ಹೆತ್ತೂ ರಾಷ್ಟ್ರದ ಪೋಷಣೆಗೆ ಆ ಮಕ್ಕಳನ್ನು ಒಪ್ಪಿಸುವ ತಾಯಂದಿರಿಗೆ ಮಕ್ಕಳಿಲ್ಲದೆ ಬೇಸರಿಕೆಯಾಗಿದೆ. ಆ ತಾಯಂದಿರು ಶಿಶು ಸಂರಕ್ಷಣಾಲಯಗಳಿಗೆ ನುಗ್ಗಿ ತಮ್ಮ ಮಕ್ಕಳನ್ನೇ ಕದ್ದು ಸೆರೆಯಾದುದುಂಟು. ಸಂತಾನ ನಿಯಮ ಪ್ರತಿಪಾದಕರು ಏನನ್ನೇ ಹೇಳಲಿ “ಮಕ್ಕಳ ಕೊಡು, ಮುತ್ತೈದೆತನ ಕೊಡು, ಮಾರಾಯರ ಮುಂದೆ ಮರಣ ಕೊಡು” ಇವು ನಮ್ಮ ಹಳ್ಳಿ ಹೆಣ್ಣುಮಕ್ಕಳ ಗುರಿಗಳು. ಮುರುಕು ತೊಟ್ಟಿಲಿಗೆ ಹರಕು ಚಾಪೆ ಹಾಸಿ, ಅರಚು ಪಾಪನನ್ನು ಮಲಗಿಸುವುದು ನಮ್ಮ ಹಳ್ಳಿಯವರ ನಿತ್ಯ ಅನುಭವ. ಹಾಸಿಗೆ ಇಲ್ಲದ ಮಕ್ಕಳಿಗೆ ತನ್ನ ಸೀರೆಯನ್ನೇ ಹಾಸಿ, ಇನ್ನಿಬ್ಬರು ಮಕ್ಕಳಿದ್ದರೆ ಲೇಸಾಗುತ್ತಿತ್ತು ಎಂದು ಕೊರಗುವ ಗರತಿ ಇರುವ ದೇಶ ಇದು. ಹಳ್ಳಿಯ ಹೆಣ್ಣುಮಕ್ಕಳಿಗೆ ಬಡತನ, ಸಿರಿತನಗಳು ಭಗವಂತನ ಚಂಚಲ ಕಟಾಕ್ಷಗಳೆಂದು ಗೊತ್ತು. ಪಾಂಡವರಿಗೆ ಸಹ ತಿರಿದುಂಬುವ ದೆಸೆ ಬಂದಿತು. “ಸಮುದ್ರಕ್ಕೆ ಸೇತುವೆ ಕಟ್ಟಿದ ಹನುಮಂತ

ಬಂಟನಿದ್ದರೂ ಸೀತಾದೇವಿ ಅಡವಿ ಅರಣ್ಯದಾಗ ಹಡೆದಳು. ತೊಡಿಯ ತೊಳೆಯೋಕೆ ನೀರಿಲ್ಲ''. ಎಷ್ಟು ಕಷ್ಟವಾದರೂ ಮಕ್ಕಳು ಬೇಕೇ ಬೇಕು. ಬೇನೆಯ ತಿನ್ನುವಾಗ ಬೇಡಯ್ಯ ಮಕ್ಕಳು. ಫಲವುಂಟಾದ ನಂತರ ಹಿಂದಿನ ಯಾವ ಕಷ್ಟವೂ ಕಷ್ಟವಾಗಿಯೇ ಕಾಣುವುದಿಲ್ಲ. ಆ ಬೇನೆಗಳೆಲ್ಲ ಸುಖದ ಕಜ್ಜಾಯಗಳಾಗಿಯೇ ತೋರುತ್ತವೆ.

ಬಾಲನ ಹೆರುವಾಗ ಬಾಡಿತಮ್ಮನ ಮೊಗ
ಬಾಲ ಚಂಡಾಡಿ ಬರುವಾಗ । ಅಮ್ಮನ ಮೊಗ
ಕುಂದಣದ ಚಿನ್ನ ಹೊಳೆದಂತೆ ॥

www.prepp.in

**144.** ಹೆಣ್ಣಿಗೆ ಮನೆಯ ಯಜಮಾನಿಕೆ ಸಿಗುವುದು

(1) ಮದುವೆಯಾದಾಗ

(2) ಗಂಡ ಮಾತು ಕೇಳುವವನು ಆದಾಗ

(3) ಸಾಕಷ್ಟು ವಯಸ್ಸು ಆದಾಗ

(4) ಮಕ್ಕಳಾದಾಗ

**145.** ಮಕ್ಕಳಿಲ್ಲದ ಬಾಳು ಯಾವುದಕ್ಕೆ ಸಮ ಎನ್ನುತ್ತದೆ ಈ ಬರಹದಲ್ಲಿ?

(1) ಉಂಡು ಬೀಸಿ ಒಗೆದ ಬಾಳೆ ಎಲೆಗೆ ಸಮ

(2) ವೈಧವ್ಯಕ್ಕೆ ಸಮ

(3) ಬಂಜೆತನಕ್ಕೆ ಸಮ

(4) ಸಾವಿಗೆ ಸಮ

**146.** ಈ ಪ್ರಬಂಧದ ಪ್ರಕಾರ ಜೀವನದ ಮೂಲಭೂತ ನಿಯಮ :

(1) ಆಚಾರ, ವಿಚಾರಗಳಲ್ಲಿ ತೊಡಗುವುದು

(2) ದೇವರುಗಳನ್ನು ಭಕ್ತಿಯಿಂದ ಪೂಜಿಸುವುದು

(3) ಸಂತಾನದ ಮೂಲಕ ಜೀವನ ಮುಂದುವರಿಸುವ ಅಪೇಕ್ಷೆ

(4) ಮಾತು, ನಡವಳಿಕೆಯಲ್ಲಿ ಪ್ರಾಮಾಣಿಕತೆ ತೋರುವುದು

**147.** ರಷ್ಯಾದಲ್ಲಿ ತಾಯಿಯಂದಿರಿಗೆ [illegible] ಕಾರಣ :

Prepp
Your Personal Exams Gu

(1) ರಾಷ್ಟ್ರವೇ ಮಕ್ಕಳ ಪೋಷಣೆ ಮಾಡುತ್ತದೆ

(2) ತಾಯಿಯಾಗಲು ಶಿಶು ಸಂರಕ್ಷಣಾಲಯದ ಮಗುವನ್ನು ಕದಿಯುವುದರಿಂದ

(3) ತಾಯಿಯಾಗಬೇಕೆಂಬ ಆಸೆಯಿಂದ

(4) ಮಕ್ಕಳಾಗದೇ ಕಾಯ್ದು ಬೇಸರ

**148.** 'ಚಂಚಲ' ಪದದ ವಿರುದ್ಧ ಅರ್ಥ ಕೊಡುವ ಪದ

(1) ಅಸ್ಥಿರ

(2) ಚಲ

(3) ಸ್ಥಿರ

(4) ಧ್ಯಾನ

**149.** 'ಕುಂದಣ' ಪದದ ಅರ್ಥ

(1) ಒಂದು ಬಗೆಯ ಸಿಹಿ ಪದಾರ್ಥ

(2) ಚಿನ್ನ

(3) ವಜ್ರ

(4) ಹಚ್ಚೆ ಹೊಯ್ಯುವುದು

**150.** ಬಡವಳಾದರೂ ತಾಯಿಯ ಅಪೇಕ್ಷೆಯು ಹೀಗಿದೆ :

(1) ಮಕ್ಕಳಿಗೆ ಸುಖವಾದ ಬದುಕು ಸಿಗಲಿ ಎನ್ನುವುದು

(2) ಹೆಚ್ಚು ಮಕ್ಕಳಾಗದಿರಲಿ ಎನ್ನುವುದು

(3) ತನಗೆ ಇಲ್ಲದಿದ್ದರೂ ಮಕ್ಕಳಿಗೆ ಊಟ ಸಿಗಲಿ ಎಂದು

(4) ಇನ್ನೂ ಮಕ್ಕಳಾಗಲಿ ಎನ್ನುವುದು

Prepp Your Personal Exam Guide

www.prepp.in

SPACE FOR ROUGH WORK

Prepp
Your Personal Exams Gu

Prepp
Your Personal Exam Guide

www.prepp.in
Prepp
Your Personal Exams Gu
Prepp Your Personal Exam Guide

www.prepp.in

ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ. ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.

2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.

3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.

4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.

5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).

6. OMR ಉತ್ತರ ಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.

7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.

8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.

9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ಅನ್ನು ನಿರೀಕ್ಷಕರಿಗೆ ತೋರಿಸಬೇಕು.

10. ಕೇಂದ್ರ ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.

11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

12. ಎಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.

13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.

14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.

15. ಪರೀಕ್ಷೆ ಮುಗಿದ ನಂತರ ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

## निम्नलिखित निर्देशों को ध्यान से पढ़ें :

www.prepp.in

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर-पत्र के **पृष्ठ-2** पर केवल एक वृत्त को ही पूरी तरह **काले/नीले बॉलपॉइंट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस उत्तर-पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं उत्तर-पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर-पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/उत्तर-पत्र में दिए गए परीक्षा पुस्तिका संकेत व संख्या को परीक्षार्थी सही तरीके से हाजिरी-पत्र में लिखें।
6. OMR उत्तर-पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और उनके विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना उत्तर-पत्र दिए बिना एवं हाजिरी-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार हाजिरी-पत्र पर हस्ताक्षर नहीं किए, तो यह माना जाएगा कि उसने उत्तर-पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अँगूठे का निशान हाजिरी-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं। अनुचित साधनों के सभी मामलों का फैसला बोर्ड के नियमों एवं विनियमों के अनुसार होगा।
14. किसी हालत में परीक्षा पुस्तिका और उत्तर-पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व उत्तर-पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

Prepp Your Personal Exams Guide

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Black/Blue Ballpoint Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the Examination Hall/Room.
8. Mobile phones, wireless communication devices (even in switched off mode) and the other banned items should not be brought in the Examination Halls/Rooms. Failing to comply with this instruction, it will be considered as using unfair means in the examination and action will be taken against them including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Board with regard to their conduct in the Examination Hall/Room. All cases of unfair means will be dealt with as per Rules and Regulations of the Board.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall/Room.** ***The candidates are allowed to take away this Test Booklet with them.***